# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ

**ಸಿಸಿ ನಂ 55/2021**

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 03-02-2024 ರಂದು ಪ್ರಮಾಣ ಮಾಡಿಸಲಾಯಿತು

| | | | |
|---|---|---|---|
| ಸಾಕ್ಷಿಯ ಹೆಸರು | ಃ | ವರುಣ ಕಾಂಡಪಾಲ್ | ಪ್ರಾ.ಸಾ ಃ 1 |
| ತಂದೆ ಃ ಗಂಡ ಹೆಸರು | ಃ | ಜನಾರ್ಧನ | ಚಾ.ಸಾ ಃ 1 |
| ವಯಸ್ಸು | ಃ | 36 ವರ್ಷ | |
| ಉದ್ಯೋಗ | ಃ | ಶಾಖಾ ವ್ಯವಸ್ಥಾಪಕರು, ಎಸ್ ಬಿ ಐ ಸಹಕಾರ ನಗರ ಬ್ರ್ಯಾಂಚ, ಬೆಂಗಳೂರು | |
| ವಾಸಸ್ಥಳ | ಃ | ಬೆಂಗಳೂರು | |

**ಮುಖ್ಯ ವಿಚಾರಣೆ ಃ ಎ ಪಿ ಪಿ ಅವರಿಂದ**ಃ

ನಾನು ದಿನಾಂಕ 08.08.2016 ರಿಂದ 14.10.2017 ರವರೆಗೆ ಎಸ್ ಬಿ ಎಂ ಬ್ಯಾಂಕಿನ ಕಲಘಟಗಿ ಶಾಖೆಯಲ್ಲಿ ಶಾಖಾ ವ್ಯವಸ್ಥಾಪಕನಾಗಿ ಕರ್ತವ್ಯನಿರ್ಹಿಸಿದ್ದೇನೆ.

ನಾನು ಆ ಸಮಯದಲ್ಲಿ ಶಾಖಾ ವ್ಯವಸ್ಥಾಪಕ ಹುದ್ದೆಯಿಂದ ವರ್ಗಾಣೆಗೊಂಡಿದ್ದ ಶ್ರೀಮತಿ ರೋಹಿಣಿ ಚಿತ್ತರಂಜನ್ ದಾನಿ ಇವರಿಂದ ಪ್ರಭಾರ ವಹಿಸಿಕೊಂಡಿರುತ್ತೇನೆ. ಪ್ರಭಾರವಹಿಸಿಕೊಂಡ ದಾಖಲೆ ಪರಿಶೀಲಿಸಿದ ನಂತರ ಒಟ್ಟು 9 ವಾಹನ ಖರೀದಿ ಸಾಲಗಳ ಖಾತೆಗಳಿಗೆ ಸಂಬಂಧಿಸಿದಂತೆ ದಾಖಲೆಗಳು ಕ್ರಮಬದ್ಧವಾಗಿ ಇರಲಿಲ್ಲ. ದಾಖಲೆಗಳನ್ನು ಪರಿಶೀಲಿಸುತ್ತಾಹೋದ ನಂತರ ಈ ಕೇಸಿನ ಆರೋಪಿ ರಾಘವೇಂದ್ರ ಬಸವರಾಜ ಪಾಟೀಲ ಇವರು ರೂ 4 ಲಕ್ಷ ವಾಹನ ಖರೀದಿ ಸಾಲ ಪಡೆದಿದ್ದು ಸದರಿ ಸಾಲಕ್ಕೆ 2ನೇ ಆರೋಪಿ ನಿಂಗರಾಜ ಜಾಮೀನದಾರನಾಗಿದ್ದ. ಸದರಿ ಸಾಲದ ಕಂತಿನ ಅವಧಿ ಮುಗಿದಿದ್ದರು ಸಹ ಕಂತು ಕಟ್ಟದೆ ಇರುವುದು ಮತ್ತು ಕಾರ ಖರೀದಿಸಿದ ಬಗ್ಗೆ ದಾಖಲೆಗಳು ಇರಲಿಲ್ಲ. ಕೂಡಲೆ ನಾನು 1ನೇ ಆರೋಪಿಯ ಮನೆಗೆ ಹೋಗಿ ವಿಚಾರಿಸಿದ್ದು, ಅಲ್ಲಿ ನಮ್ಮ ಬ್ಯಾಂಕಿನಿಂದ ಸಾಲ ಪಡೆದು ಖರೀದಿಸಿದ್ದಾನೆ ಎನ್ನಲಾದ ಕಾರು ಸಹ ಇರಲಿಲ್ಲ. ಕೂಡಲೆ ನಾನು 1 ಮತ್ತು 2ನೇ ಆರೋಪಿತರಿಗೆ ಕಾರಿನ ದಾಖಲೆಗಳನ್ನು ಹಾಜರ ಪಡಿಸುವಂತೆ ಮತ್ತು ಸಾಲ ಹಾಗೂ ಬಡ್ಡಿ ಮರುಪಾವತಿಸುವಂತೆ ನೋಟೀಸ ನೀಡಿರುತ್ತೇನೆ. ಆದರೆ ಆರೋಪಿತರು ಕಾರು ಖರೀದಿಸಿದ ಬಗ್ಗೆ ಯಾವುದೆ ದಾಖಲೆಗಳನ್ನು ಹಾಜರ ಪಡಿಸಲಿಲ್ಲ. ನಂತರ ನಾನು ಸಾಲದ ಅರ್ಜಿಯೊಂದಿಗೆ ಸಲ್ಲಿಸಿದ ಕೊಟೇಷನ ಪ್ರಕಾರ ಕಾರ ಡಿಲರ್ ಆದ ಭಾಗ್ಯ ಲಕ್ಷ್ಮಿ ಮೋಟರ್ಸ ಹೊಸಪೇಟೆ ರವರಿಗೆ ಪತ್ರ ಬರೆದಿದ್ದು, ಆದರೆ ಅವರು ಪತ್ರಕ್ಕೆ ಉತ್ತರಿಸದ ಕಾರಣ ಅವರನ್ನು ಪೋನ ಮೂಲಕ ಸಂಪರ್ಕಿಸಿದ್ದು, ಆದರೆ ಸದರಿ ಕಾರ ಶೂರೂಂನವರು ಬ್ಯಾಂಕಿನಿಂದ ಮಂಜೂರಾದ ಹಣ ತಮಗೆ ತಲುಪಿಲ್ಲ ಎಂದು ತಿಳಿಸಿದರು. ಇದರಿಂದ ಆರೋಪಿತರು ಕಾರು ಖರೀದಿಸದೆ ಬ್ಯಾಂಕಿನಿಂದ ಮೋಸದಿಂದ ಸಾಲ ಪಡೆದಿರುವ ಬಗ್ಗೆ ಸಂಶಯ ಉಂಟಾಗಿದ್ದರಿಂದ ಆ ಬಗ್ಗೆ ನಾನು ನನ್ನ ಮೇಲಾಧಿಕಾರಿಗಳಿಗೆ ವಿಷಯ ತಿಳಿಸಿದೆನು.

ಮೇಲಾಧಿಕಾರಿಗಳು ಆ ಬಗ್ಗೆ ದೂರು ದಾಖಲಿಸಲು ಸೂಚನೆ ನೀಡಿದ್ದರಿಂದ ನಾನು ದೂರು ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿದ ಖಾಸಗಿ ದೂರು ನಿಪಿ-1 ಎಂದು, ಸಾಕ್ಷಿ ಸಹಿಗಳನ್ನು ನಿಪಿ-1 (ಎ) ದಿಂದ (ಇ) ಎಂದು ಗುರುತಿಸಿದೆ.

**(ಈ ಹಂತದಲ್ಲಿ ಎ ಪಿ ಪಿ ರವರ ವಿನಂತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಿದೆ)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**